# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 424/2022

ಸಾಕ್ಷಿಗೆ ದಿನಾಂಕ 17-04-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 5 P.W.: 5

| | | |
|---|---|---|
| ಹೆಸರು | ಃ | ಶಿವಪ್ಪ |
| ತಂದೆಯ ಹೆಸರು | ಃ | ಮೂಗಪ್ಪ |
| ವಯಸ್ಸು | ಃ | 76 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ನೆಲ್ಲುಕುದುರೆ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿತರು ಮತ್ತು ಚಾಸಾ-1, 4 ರವರು ನನಗೆ ಸಂಬಂಧಿಕರು ಇರುತ್ತಾರೆ. ಚಾಸಾ-6 ಮತ್ತು 7 ರವರು ನಮ್ಮ ಊರಿನವರು ಇರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ, ನಾನು ಯಾವುದೇ ಗಲಾಟೆ ನೋಡಿಲ್ಲ, ಯಾವುದೇ ಜಗಳ ಬಿಡಿಸಿಲ್ಲ, ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 31-03-2022 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-3 ರವರು ಕೆಲಸದ ನಿಮಿತ್ತ ಹೆಚ್ ಬಿ ಹಳ್ಳಿಗೆ ಹೋಗಲು ನನ್ನ ಮೋಟಾರು ಸೈಕಲ್ಲಿನಲ್ಲಿ ಹೋಗುತ್ತಿದ್ದಾಗ ಚಾಸಾ-6 ಮತ್ತು ಆರೋಪಿತರ ನಡುವೆ ಗಲಾಟೆಯಾಗುವ ಧ್ವನಿಯನ್ನು ಕೇಳಿ ನಮ್ಮ ಬೈಕ್ ನಿಲ್ಲಿಸಿ ಹೋಗಿ ನೋಡಲಾಗಿ ಚಾಸಾ-6 ರವರು 1ನೇ ಆರೋಪಿತರಿಗೆ ನಮ್ಮ ಶೇಂಗಾ ಒಟ್ಟಿನ ಬಣವಿಕಡೆ ಏಕೆ ನೀರು ಬಿಡುತ್ತೀರಿ ಅಂತಾ ಕೇಳಿದ್ದಕ್ಕೆ 1ನೇ ಆರೋಪಿತನು ಚಾಸಾ-1 ರವರಿಗೆ ಅವಾಚ್ಯ ಶಬ್ದದಿಂದ ಬೈದು, ತನ್ನ ಬಲಕಾಲಿನಿಂದ ಚಾಸಾ-1 ರವರಿಗೆ ಹೊಡೆದು ಕೆಳಗೆ ಬೀಳಿಸಿದನು, 2ನೇ ಆರೋಪಿತನು ಕಟ್ಟಿಗೆಯಿಂದ ಚಾಸಾ-1 ರವರ ಕೈ ಕಾಲಿಗೆ ಹೊಡೆದನು, 3ನೇ ಆರೋಪಿತಳು ಚಾಸಾ-1 ರವರ ಗುಪ್ತಾಂಗಕ್ಕೆ ಕೈಹಾಕಿ ಗಾಸಿಗೊಳಿಸಿದಳು, ಬಿಡಿಸಲು ಹೋದ ಚಾಸಾ-4 ರವರಿಗೆ 4ನೇ ಆರೋಪಿತನು ಅವಾಚ್ಯ ಶಬ್ದದಿಂದ ಬೈಯುತ್ತಾ ತನ್ನ ಬಲಕಾಲಿನಿಂದ ಸೊಂಟಕ್ಕೆ ಹೊಡೆದು ಕೆಳಗೆ ಬೀಳಿಸಿದನು, ನಾನು, ಚಾಸಾ-3 ಮತ್ತು 6 ರವರು

ಸೇರಿ ಗಲಾಟೆಯನ್ನು ಬಿಡಿಸಿರುತ್ತೇವೆಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಮತ್ತು 4 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ಘಟನೆಯ ಕುರಿತು ನಾನು ದಿಃ 03-04-2022 ರಂದು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು ಮಾಲುಗಳಿಂದ ಆರೋಪಿತರು ಚಾಸಾ-1 ಮತ್ತು 4 ರವರ ಮೇಲೆ ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಆರೋಪಿತರು ನನ್ನ ಸಂಬಂಧಿಕರು ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ